## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ರೆಹನಾಬಾಬು ಬೆಳಗಾಂವಕರ, ಅಧ್ಯಕ್ಷರು, ಬೆನಕನಹಳ್ಳಿ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ ಇವರ ಪತ್ರ ಸಂಖ್ಯೆ: ಜಿಪಂಬೆ/ಪರಿಷತ್/ವಿವ/ನೇರ/18-19, ದಿನಾಂಕ 06.08.2018
2) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 19.09.2018
3) ಶ್ರೀಮತಿ ರೆಹನಾಬಾಬು ಬೆಳಗಾಂವಕರ, ಅಧ್ಯಕ್ಷರು, ಬೆನಕನಹಳ್ಳಿ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರು ಕಾರಣ ಕೇಳಿ ನೋಟೀಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ 16.10.2018
4) ಇದೇ ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ 04.01.2019

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಸರ್ವೆ ನಂ.59/7 ವಿಸ್ತೀರ್ಣ 2ಎಕರೆ 34 ಗುಂಟೆ ಜಮೀನನ್ನು ಜಿಲ್ಲಾಧಿಕಾರಿಗಳಿಂದ ಭೂಪರಿವರ್ತನೆ ಮಾಡಲಾಗಿದೆ. ಭೂಪರಿವರ್ತನೆಯಾದ 4 ತಿಂಗಳೊಳಗಾಗಿ ಸದರಿ ಜಮೀನಿನಲ್ಲಿ ನಿವೇಶನಗಳನ್ನು ಸೃಷ್ಟಿಸಲು ವಿನ್ಯಾಸ ನಕ್ಷೆಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ನಿವೇಶನಗಳನ್ನು ನೀಡಬಹುದಾಗಿರುತ್ತದೆ ಎಂದು ನಿಬಂಧನೆ ವಿಧಿಸಲಾಗಿದೆ. ಈ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ಸಕ್ಷಮ ಪ್ರಾಧಿಕಾರದಿಂದ ಲೇಔಟ್ ನಕಾಶೆಗೆ ಮಂಜೂರಾತಿ ಪಡೆದಿರುವುದಿಲ್ಲ. ಆದರೂ ಸಹ ದಿನಾಂಕ 21.02.2017ರ ಸಾಮಾನ್ಯ ಸಭೆಯಲ್ಲಿ ಠರಾವು ಮಾಡಿ, ಸದರಿ ಜಮೀನಿನ ಮಾಲೀಕರಿಗೆ ಲಾಭ ಮಾಡಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಮತ್ತು ಪಂಚಾಯತ್ ರಾಜ್ ಕಾಯ್ದೆಗಳನ್ನು ಉಲ್ಲಂಘನೆ ಮಾಡಿರುವುದು ಹಾಗೂ ಸರ್ವೆ ಸಂ. 70/2, 10 ಗುಂಟೆ ಜಮೀನು ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗಿರುವುದಿಲ್ಲ ಹಾಗೂ ಸಂಬಂಧಪಟ್ಟ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆಯ ಅನುಮೋದನೆ ಆಗಿರುವುದಿಲ್ಲ. ಆದರೂ ಸಹ ಈ ಜಾಗದಲ್ಲಿ ಬಹುಮಹಡಿ ಕಟ್ಟಡ ಕಟ್ಟಲು ಗ್ರಾಮ ಪಂಚಾಯತಿಯಿಂದ ಪರವಾನಗಿ ನೀಡಿರುವ ಆರೋಪಗಳ ಹಿನ್ನೆಲೆಯಲ್ಲಿ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸಿ, ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ಏಕೆ ತೆಗೆದು ಹಾಕಬಾರದು ಎಂಬುದರ ಬಗ್ಗೆ ವಿವರಣೆ ನೀಡುವಂತೆ ಸದರಿ ಆಪಾದಿತ ಅಧ್ಯಕ್ಷರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3) ರಲ್ಲಿ ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರು ಸರ್ಕಾರದಿಂದ ಜಾರಿಗೊಳಿಸಲಾಗಿದ್ದ ಕಾರಣ ಕೇಳಿ ನೋಟಿಸಿಗೆ ಲಿಖಿತ ಆಕ್ಷೇಪಣೆಯನ್ನು ಕೆಳಗಿನಂತೆ ಸಲ್ಲಿಸಿರುತ್ತಾರೆ.

1) "ಅಧ್ಯಕ್ಷಳಾಗಿ ಎಲ್ಲಾ ಚುನಾಯಿತ ಪ್ರತಿನಿಧಿಗಳೊಂದಿಗೆ ಅತೀ ನಮ್ರತೆಯಿಂದ ನಡೆದುಕೊಂಡು ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಡೆಸಿಕೊಂಡು ಬಂದಿರುವೆನು. ಎಲ್ಲಾ ಸದಸ್ಯರ ಸಲಹೆ ಸೂಚನೆಯನ್ನು ಕಾಲಕಾಲಕ್ಕೆ ಸಭೆ ಕಡೆದು ಅವರ ಆಶೋತ್ತರಗಳನ್ವಯ ನಮ್ಮ ಪರಿಮಿತಿಯಲ್ಲಿ ಅತಿ ಸೌಜನ್ಯದಿಂದ ಜನರ ಸೇವೆಗೆ ಸ್ಪಂದಿಸಿರುವೆನು.

Scanned with CamScanner

2) ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಸೋತಿರುವುದರಿಂದ ದೂರುದಾರರು ನನ್ನ ಜೊತೆ ದ್ವೇಷ ಸಾಧಿಸುತ್ತ ಬಂದಿದ್ದು, ಈಗಾಗಲೇ ನನ್ನ ವಿರುದ್ಧ ಅಪಪ್ರಚಾರ ಮಾಡುತ್ತ ಉಚ್ಚ ನ್ಯಾಯಾಲಯಕ್ಕೆ ಮತ್ತು ಸರ್ಕಾರಕ್ಕೆ ಮನವಿ ಸಲ್ಲಿಸಿ ಸಾಕಷ್ಟು ತೊಂದರೆ ನೀಡುತ್ತಾ ಬಂದಿದ್ದು, ಪೇಚಿಗೆ ಸಿಲುಕಿಸಬೇಕೆಂಬ ಮನೋಭಾವ ಹೊಂದಿರುವರು.

3) ದಿನಾಂಕ 21.02.2017ರ ಸಾಮಾನ್ಯ ಸಭೆಗೆ 31ಜನ ಚುನಾಯಿತ ಪ್ರತಿನಿಧಿಗಳು ಹಾಜರಿದ್ದು, ಸಭೆಯಲ್ಲಿ ಕ್ರಾಂತಿ ನಗರದ ರಿ.ಸ.ನಂ. 59/7 ಇದರ ಮಾಲೀಕರಾದ ಶಿಲ್ಪಾ ವರ್ಣೇಕರ ಹಾಗೂ ದೀಪಾ ವರ್ಣೇಕರ ಇವರ ಎನ್.ಎ. ಪರ್ಮಿಟ್ ಕಾಗದ ಪತ್ರಗಳನ್ನು ಮತ್ತು ಇನ್ನೂ ಕೆಲವು ವಿಷಯಗಳನ್ನು ಪ್ರಸ್ತಾಪಿಸಿ ಪಂಚಾಯತಿಯಲ್ಲಿ ತಮ್ಮ ಹೆಸರು ನೊಂದಾವಣೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

4) ಸದರಿ ಅರ್ಜಿಯ ವಿಷಯವನ್ನು ಕೂಲಂಕುಷವಾಗಿ ವಿಚಾರಿಸಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಚುನಾಯಿತ ಪ್ರತಿನಿಧಿಗಳು ಸಮ್ಮತಿಸಿದರು. ಆ ಸಭೆಯಲ್ಲಿ ದೂರುದಾರರಾದ ಶ್ರೀಮತಿ ಸವಿತಾ ವಾಗ್ಮೋರೆ ಇವರು ಹಾಜರಿದ್ದು ಅವರು ತಮ್ಮ ಸಮ್ಮತಿ ಸೂಚಿಸಿದರು. ಅರ್ಜಿಯನ್ನು ಸ್ವೀಕರಿಸಿ ನೊಂದಣಿ ಮಾಡಬಹುದೆಂದು ವಿಶೇಷ ಮುತುವರ್ಜಿ ವಹಿಸಿ ಸಲಹೆ ಸೂಚನೆ ನೀಡಿದರು.

5) ಅದೇ ಪ್ರಕಾರ ಠರಾವ ನಂ.11 ದಿನಾಂಕ 08.01.2016 ರಿಸನಂ 70/2 ಶ್ರೀ ಕರುಣಾಕರ ಬಿ.ನಾಯಿಕ ಇವರ ಅರ್ಜಿಯನ್ನು ಸರ್ವಾನುಮತದಿಂದ ಅಂಗೀಕರಿಸಿದ್ದರಿಂದ ಠರಾವ ನಂ.11 ದಿನಾಂಕ 08.01.2016ರಂದು ಪಾಸು ಮಾಡಲಾಯಿತು.

6) ಆದರೆ ತದನಂತರ ಶ್ರೀಮತಿ ಸವಿತಾ ವಾಗ್ಮೋರೆಯವರು ನಂತರ ದೂರು ನೀಡಿದ್ದು, ಠರಾವ ನಂ.8, ದಿನಾಂಕ 21.02.2017ನ್ನು ಸರ್ವಾನುಮತದಿಂದ ಅಂಗೀಕರಿಸಿದ್ದು, ಎಲ್ಲರ ಸಲಹೆ ಸೂಚನೆ ಮೇರೆಗೆ ಪಾಸು ಮಾಡಲಾಗಿದೆ. ಇದರಲ್ಲಿ ದುರುದ್ದೇಶವಾಗಲೀ, ಅಲಕ್ಷತೆ, ಲಾಭಕ್ಕೋಸ್ಕರವಾಗಲೀ ಕಾಯ್ದೆ ಉಲ್ಲಂಘನೆ ಮಾಡುವುದಾಗಲೀ ಅಥವಾ ಏಕಪಕ್ಷೀಯವಾಗಿ ಮಾಡಿರುವುದಿಲ್ಲ. ಆದರೆ ದೂರುದಾರರು ತಾವೇ ಸಮ್ಮತಿ ಸೂಚಿಸಿರುವುದು ದುರದೃಷ್ಟಕರ.

7) ಈಗಲಾದರೂ ಠರಾವ ನಂ.8, ದಿನಾಂಕ 21.02.2017 ಇದು ಸಮಂಜಸವಲ್ಲವೆಂದರೆ ಅದನ್ನು ರದ್ದುಪಡಿಸಬಹುದು. ಅದರೆ ಬಗ್ಗೆ ಸಾಮಾನ್ಯಸಭೆಯಲ್ಲಿ ನಿರ್ಣಯ ಕೈಗೊಳ್ಳಬಹುದಾಗಿದೆ. ಅದೇ ಪ್ರಕಾರ ಠರಾವ ಸಂಖ್ಯೆ:11 ದಿನಾಂಕ 08.01.2016 ಇದು ಸರ್ವಾಮತದಿಂದ ಪಾಸಾಗಿದೆ. ಕಾರಣ ತಾವುಗಳು ಸಾರಾಸಾರಾ ವಿಚಾರಿಸಿ ಮನವಿಯನ್ನು ಪುರಸ್ಕರಿಸಿ ತಪ್ಪುಗಳಾಗಿದ್ದಲ್ಲಿ ಮುಂದಿನ ದಿನಗಳಲ್ಲಿ ನಿಯಮಾನುಸಾರವಾಗಿ ಕ್ರಮಬದ್ಧತೆಯಿಂದ ಕೆಲ ನಿರ್ವಹಿಸುವೆನು ಎಂದು ಭರವಸೆ ನೀಡುವ ನನಗೆ ಅವಕಾಶ ನೀಡಬೇಕೆಂದು ಮನವಿ ಮಾಡುತ್ತೇನೆ."

ಪ್ರಕರಣದ ವಿಚಾರಣೆಯನ್ನು ದಿನಾಂಕ 11.01.2019ರಂದು ಜರುಗಿಸಲಾಗಿದೆ. ಆಪಾದಿತ ಬೆಳಗಾವಿ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ರೆಹನಾಬಾಬು ಬೆಳಗಾಂವಕರ, ಬೆಳಗಾವಿ ಜಿಲ್ಲಾ ಪಂಚಾಯತಿಯ ಸಹಾಯಕ ಯೋಜನಾಧಿಕಾರಿ ಹಾಗೂ ಬೆನಕನಹಳ್ಳಿ ಗ್ರಾಮ ಪಂಚಾಯತಿಯ ಹಾಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಜರಾಗಿರುತ್ತಾರೆ.

ಭೂಪರಿವರ್ತನೆಯಾದ ಸರ್ವೆ ನಂ.59/7 ವಿಸ್ತೀರ್ಣ 2ಎಕರೆ 34 ಗುಂಟೆ ಜಮೀನನ್ನು ನಿಯಮಗಳನ್ನು ಉಲ್ಲಂಘಿಸಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಅಥವಾ ಸಂಬಂಧಪಟ್ಟ ಇತರೆ ಸಕ್ಷಮ ಪ್ರಾಧಿಕಾರದಿಂದ ಲೇಔಟ್ ನಕಾಶೆಗೆ ಮಂಜೂರಾತಿ ಪಡೆಯದೆ, ದಿನಾಂಕ 21.02.2017ರ ಸಾಮಾನ್ಯ ಸಭೆಯಲ್ಲಿ ಠರಾವು ಮಾಡಿ, ಖಾತೆಗಳನ್ನು ಮಾಡುವ ಮೂಲಕ ಸದರಿ ಜಮೀನಿನ ಮಾಲೀಕರಿಗೆ ಲಾಭ ಮಾಡಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಮತ್ತು ಪಂಚಾಯತ್ ರಾಜ್ ಕಾಯ್ದೆಗಳನ್ನು ಉಲ್ಲಂಘನೆ ಮಾಡಿರುವುದು ಹಾಗೂ ಸರ್ವೆ ಸಂ. 70/2, 10 ಗುಂಟೆ ಜಮೀನು ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗದೆ ಇದ್ದರೂ ಸಂಬಂಧಪಟ್ಟ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆಯ ಅನುಮೋದನೆ ಇಲ್ಲದೆ ಬಹುಮಹಡಿ ಕಟ್ಟಡ ಕಟ್ಟಲು ಗ್ರಾಮ ಪಂಚಾಯತಿಯಿಂದ ಪರವಾನಗಿ ನೀಡಿರುವ ಆರೋಪಗಳ ಮೇಲೆ ಆಪಾದಿತರ ಸದಸ್ಯತ್ವ ತೆಗೆದು ಹಾಕಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ ಜಿಲ್ಲಾ ಪಂಚಾಯತಿ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

Scanned with CamScanner

ಸರ್ಕಾರದಿಂದ ಜಾರಿಗೊಳಿಸಲಾದ ಕಾರಣ ಕೇಳಿ ನೋಟೀಸಿಗೆ ಆಪಾದಿತರು ಲಿಖಿತ ಹೇಳಿಕೆ ಸಲ್ಲಿಸಿದ್ದು, ಇವರು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯತಿ ಸದಸ್ಯರು ಹೇಳಿದ ಪ್ರಕಾರ ಅವರ ಒತ್ತಾಯದ ಮೇಲೆ ತಾನು ಇ-ಖಾತಾ ಖಾತೆ ಬದಲಾವಣೆಗೆ ಒಪ್ಪಿಗೆ ಕೊಟ್ಟಿರುತ್ತೇನೆ. ಇ-ಖಾತಾ ಮಾಡಲು ಬೇಕಿರುವ ದಾಖಲೆಗಳ ಬಗ್ಗೆ ಸಂಪೂರ್ಣ ತಿಳುವಳಿಕೆ ನನಗೆ ಇರುವುದಿಲ್ಲ. ಅಧಿಕಾರಿಗಳ ತಪ್ಪು ಮಾರ್ಗದರ್ಶನದಿಂದ ನನ್ನಿಂದ ಏನಾದರೂ ತಪ್ಪಾಗಿದ್ದರೆ ಅದಕ್ಕೆ ನಾನು ಜವಾಬ್ದಾರಳಾಗುವುದಿಲ್ಲ ಎಂದು ಹೇಳಿಕೆ ಕೊಟ್ಟಿರುತ್ತಾರೆ. ಲಿಖಿತ ಹೇಳಿಕೆಯಲ್ಲಿ ಠರಾವ ನಂ.8, ದಿನಾಂಕ 21.02.2017 ಇದು ಸಮಂಜಸವಲ್ಲವೆಂದರೆ ಅದನ್ನು ರದ್ದುಪಡಿಸಬಹುದು. ಅದರೆ ಬಗ್ಗೆ ಸಾಮಾನ್ಯಸಭೆಯಲ್ಲಿ ನಿರ್ಣಯ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಲಭ್ಯವಿರುವ ಎಲ್ಲಾ ದಾಖಲಾತಿಗಳು, ಆಪಾದಿತರ ಲಿಖಿತ ಹಾಗೂ ಮೌಖಿಕ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಈ ಹಿಂದೆ ಮತ್ತೊಂದು ಪ್ರಕರಣದಲ್ಲಿ ಅಧಿನಿಯಮದ ಪ್ರಕರಣ 43ಎ ರನ್ವಯ ಕ್ರಮ ಜರುಗಿಸಿ ಸರ್ಕಾರದಿಂದ ಆಪಾದಿತರಿಗೆ ಎಚ್ಚರಿಕೆ ನೀಡಿ ಆದೇಶಿಸಲಾಗಿದೆ. ಭೂಪರಿವರ್ತನೆಯಾದ ನಿಯಮಗಳನ್ನು ಉಲ್ಲಂಘಿಸಿ ಸೆಕ್ಷಮ ಪ್ರಾಧಿಕಾರದಿಂದ ಲೇಔಟ್ ನಕಾಶೆಗೆ ಮಂಜೂರಾತಿ ಪಡೆಯದೆ ಖಾತೆಗಳನ್ನು ಮಾಡಿರುವುದು ಹಾಗೂ ಜಮೀನು ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗದೆ ಇದ್ದರೂ ಸಂಬಂಧಪಟ್ಟ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆಯ ಅನುಮೋದನೆ ಇಲ್ಲದೆ ಬಹುಮಹಡಿ ಕಟ್ಟಡ ಕಟ್ಟಲು ಗ್ರಾಮ ಪಂಚಾಯತಿಯಿಂದ ಪರವಾನಗಿ ನೀಡಿ ಅವ್ಯವಹಾರ ಮತ್ತು ದುರ್ನಡತೆ ಎಸಗಿರುವುದು ಧೃಢಪಟ್ಟಿರುವುದರಿಂದ, ಆರೋಪಗಳು ಸಾಬೀತಾಗಿರುವ ಹಿನ್ನಲೆಯಲ್ಲಿ, ಬೆಳಗಾವಿ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ರೆಹನಾಬಾಬು ಬೆಳಗಾಂವಕರ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಇವರನ್ನು ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಲು ವಿಚಾರಣಾ ನಂತರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ನ್ಯಾಯಾಲಯದಲ್ಲಿ ನಿರ್ಣಯಿಸಲಾಗಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 849 ಗ್ರಾಪಂಅ 2018 ಬೆಂಗಳೂರು, ದಿನಾಂಕ: 08.03.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಭೂಪರಿವರ್ತನೆಯಾದ ನಿಯಮಗಳನ್ನು ಉಲ್ಲಂಘಿಸಿ ಸಕ್ಷಮ ಪ್ರಾಧಿಕಾರದಿಂದ ಲೇಔಟ್ ನಕಾಶೆಗೆ ಮಂಜೂರಾತಿ ಪಡೆಯದೆ ಖಾತೆಗಳನ್ನು ಮಾಡಿರುವುದು ಹಾಗೂ ಜಮೀನು ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗದೆ ಇದ್ದರೂ ಸಂಬಂಧಪಟ್ಟ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆಯ ಅನುಮೋದನೆ ಇಲ್ಲದೆ ಬಹುಮಹಡಿ ಕಟ್ಟಡ ಕಟ್ಟಲು ಗ್ರಾಮ ಪಂಚಾಯತಿಯಿಂದ ಪರವಾನಗಿ ನೀಡಿ ಅವ್ಯವಹಾರ ಮತ್ತು ದುರ್ನಡತೆ ಎಸಗಿರುವುದು ಧೃಢಪಟ್ಟಿರುವುದರಿಂದ, ಆರೋಪಗಳು ಸಾಬೀತಾಗಿರುವ ಹಿನ್ನಲೆಯಲ್ಲಿ, ಬೆಳಗಾವಿ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ರೆಹನಾಬಾಬು ಬೆಳಗಾಂವಕರ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸಿ, ಇವರನ್ನು ಬೆಳಗಾವಿ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

8/3/17

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿ:**

1) ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.

Scanned with
CamScanner

3) ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ತಾಲ್ಲೂಕು ಪಂಚಾಯತಿ, ಬೆಳಗಾವಿ
(ಸದರಿಯವರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸ್ವೀಕೃತಿಯನ್ನು ಸರ್ಕಾರಕ್ಕೆ ಕಳುಹಿಸಲು ತಿಳಿಸಿದೆ)
4) ಶ್ರೀಮತಿ ರೆಹನಾಬಾಬು ಬೆಳಗಾಂವಕರ, ಅಧ್ಯಕ್ಷರು, ಬೆನಕನಹಳ್ಳಿ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ
5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆನಕನಹಳ್ಳಿ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ
6) ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7) ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ.
2) ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

Scanned with CamScanner